೦೮-೦೧-೧೯೯೭

ಡಾ। ಸುಧಾ – ಅವ್ರು ಕೇಳ್ತಾರೆ, ಆಸೆಗಳು ಇರತ್ತಲ್ಲ. ಈ ಆಸೆಗಳು ಬಿಡೋದೇ ಇಲ್ಲ. ಒಂದಾದ್ಮೇಲೆ ಒಂದು ಆಸೆಗಳು ಬರ್ತಾನೇ ಇರತ್ತೆ. ಈಗ ತಿನ್ಬೇಕೂಂತ – ಒಂದಿನ ಇದು ತಿನ್ತೀವಿ. ಇನ್ನೊಂದಿವ್ಸ ತಿನ್ಬೇಕು ಅನ್ಸತ್ತೆ. ಈ ಥರ ಮನ್ಸು ಇಡೀ ದಿವ್ಸ ಅದೇ ಆಸೆಗಳನ್ನ ಪೂರೈಸಬೇಕು ಅಂತ ಬಯಸುತ್ತಲ್ಲ. ಆ ಒಂದು ಆಸೆಗಳ ಚಕ್ರದಿಂದ ಹ್ಯಾಗೆ ಮನಸ್ಸನ್ನ ಖಾಲಿ ಮಾಡೋದು?

ಅಜ್ಜ – ಖಾಲಿ ಮಾಡ್ಬೇಕು ಅಂತ್ಹೇಳಿ ಉಂಟ? ಆಸೆಗಳು ತೊಂದರೆ ಕೊಡ್ತದೆ? ಆಸೆಗಳು ಬರುವಂಥಾದ್ದು ಮನಸ್ಸಿಗಲ್ವಾ? ಅಲ್ಲಿ ಒಂದು ಬುದ್ಧಿ ಶಕ್ತಿ ಉಂಟು. ಮನಸ್ಸು ಚಂಚಲ. ಏನೆಲ್ಲ ಬುದ್ಧಿ ಶಕ್ತಿ ಉಂಟು ಒಳಗೆ. ಆ ಬುದ್ಧಿಯು ಈ ಮನಸ್ಸಿನ ಮೇಲೆ ಗಮನ ಇಡುವಂಥದ್ದು. ಒಂದೇ . . . ಆಸೆಗಳು . . . ಬಲಾತ್ಕಾರ ಬೇಡ. ನೂಕೋದು ಬೇಡ. ಅದೇ . . . ನೋಡಿ ಅದನ್ನು ಏನು ಆಸೆ ಬರ್ತದೆ ನೋಡುವ. ಆ ಬುದ್ಧಿ ಮನಸ್ಸಿನಲ್ಲಿ ಜೊತೆಯಾದಾಗ ಇದಕ್ಕೆ ಮಹತ್ವ ಬರ್ತದೆ. ಬುದ್ಧಿಯನ್ನಲ್ಲಿರಿಸಿಕೊಂಡು, ಮನಸ್ಸಿನ ಮೇಲೆ ನಿಗಾ ಇಟ್ಟಾಗ, ಮನಸ್ಸಿಗೆ power ಕಮ್ಮಿ ಆಗ್ತದೆ. ಒಂದೊಂದೇ ಆಸೆಗಳು ಬಿಟ್ಟು ಹೋಗ್ತದಪ್ಪ. ಮನಸ್ಸು ವೀಕ್ಷಕನಾಗಿರಲಿ. ಆಗ ಬುದ್ಧಿ ಇದ್ದುಕೊಂಡು, ಇದನ್ನು ಗಮನ ಇಡಲಿ ಇದರ ಮೇಲೆ. ಏನೆಲ್ಲ ಆಸೆ ಬರ್ತದೆ ನೋಡುವ. ಆ್ಞಂ! ಇಂಥ ಪ್ರಯೋಗವಾದಾಗ . . . ಕೆಲವೇ ನಿಮಿಷಗಳಲ್ಲಿ, ಕೆಲವೇ ನಿಮಿಷಗಳು ಸಾಕು. ಬುದ್ಧಿಯ ಸ್ವಾಧೀನದಲ್ಲಿ ಮನಸ್ಸು ಇರಬೇಕು.

ಮನಸ್ಸು ಮರ್ಕಟದ ಹಾಗೆ ಕುಣೀತದೆ. ಆ ಮರ್ಕಟನಿಗೆ ಒಬ್ಬ ಕೊರವಂಜಿ. ಅವನ ಹಿಡಿತದಲ್ಲಿ ಈ ಮರ್ಕಟ ಉಂಟು. ಅವನಿ ಸಡಿಲ ಬಿಟ್ರೆ ಆಚೆ ಹೋಯ್ತು. ಹಾಗಾದರೆ ಬುದ್ಧಿ ಇದರ ಮೇಲೆ ನಿಗಾ ಇಟ್ಟಾಗ, ಈ ಮರ್ಕಟನ ಹಾಗೆ ಇರುವ ಮನಸ್ಸಿನ ಮೇಲೆ ನಿಗಾ ಇಟ್ಟಾಗ, ಮನಸ್ಸಿನ ಆಟ ಮುಗಿಯಿತು. ಅದಕ್ಕೆ ಗೊತ್ತಾಯಿತು, ಓಹೋ, ಇದು ಆಟ ನಡೆಯೋದಿಲ್ಲ. ಆ್ಞಂ! ಆಟ ಮುಗಿಯಿತು. ಅದೇ ಇವ . . . ಆ ಮನಸ್ಸನ್ನು, ಆ ಕಲೆಯನ್ನು ಇವ ಅಭ್ಯಾಸ ಮಾಡಿಕೊಂಡಾಗ, ಮನಸ್ಸೇ ಅಲ್ಲಿ . . . ಯಾವುದು?

ಡಾ। ಸುಧಾ – (ಇಂಗ್ಲಿಷಿನಲ್ಲಿ ಹೇಳ್ತಾರೆ). ಹ್ಯಾಗೆ ಅರ್ಥ ಆಯ್ತಾ? ಮನಸ್ಸು – ಬುದ್ಧಿಶಕ್ತಿ. ಮನಸ್ಸು ಅಲ್ಲಿ ಹೋಗೋದೇ ಇಲ್ಲ. ಆ ಬುದ್ಧಿ ಇದಕ್ಕೆ ಕೂಡಿಕೊಂಡಾಗ. ಕೊರವಂಜಿಯು ಈ ಮಂಗನೊಟ್ಟಿಗೆ ಕೂಡಿಕೊಂಡಾಗ ಇದು ಹೋಯ್ತು. ಅವ ಬ್ರೇಕ್ ಹಾಕಿದಾಗ ಈ ಮನಸ್ಸು ಎಲ್ಲಿಗೆ ಹೋಗ್ತದೆ? ಇದಕ್ಕೆ ಸಾಧನೆ ಬೇಡ. ಬರೀ ಶೋಧನೆ – ನೋಡು ಅಂತ ಹೇಳ್ತದೆ. ಮನಸ್ಸು ಅಂದರೆ ಭಾವನೆಗಳ ಒಂದು ಸಮೂಹ. ಅದು ಭಾವಿಸುತ್ತದೆ. ಅದು, ಇದು ಎಲ್ಲ ಭಾವನೆಗಳೂ . . . ಅದರ ಮೇಲೆ ಇದು ನಿಗಾ ಇಟ್ಟರೆ . . . .

ಹಾಗಾದರೆ ಬೆಳಕು ಹ್ಯಾಗೆ ಗೊತ್ತಾಯಿತು ಅವನಿಗೆ? ಬೆಳಕುಂಟೂಂತ ಹ್ಯಾಗೆ ಗೊತ್ತಾಯಿತೂಂತ? ಗೊತ್ತಾಗಲೇ ಬೇಕು. \ \ \ \ \ \ \ \ \ \ \ \ \ \

ಕತ್ತಲೆಯಿಂದ ಬೆಳಕಿನ ಕಡೆಗೆ ನನ್ನನ್ನು ಕೊಂಡು ಹೋಗು. ಕೊಂಡು ಹೋದ ಇವನಿಗೆ ಗೊತ್ತಿಲ್ಲ. ಕೊಂಡು ಹೋದ. ಅದಕ್ಕೇನು ಮಾಡೋದು? ಅವನು ಪುನಃ ಬಂದ ಕತ್ತಲೆಗೆ. ಯಾಕೆ? ಹೋಗುವವರಿಗೆ ದಾರಿಯನ್ನು . . . ಅವನು ಏನು ಹೇಳ್ತಾನೆ? ಕತ್ತಲೆಯೆಂಬುದೇ ಇಲ್ಲ ಅಂತ ಹೇಳ್ತಾನೆ. ಇದು ಯಾರು ಅಜ್ಜ ಹೇಳುವ ಮಾತಲ್ಲ. ಯಾರು ಹೇಳೋದು? ಅವ ಎಲ್ಲಿದ್ದಾನೆ? ಪ್ರತಿಯೊಂದು ದೇಹದಲ್ಲೂ ಅವ ಇದ್ದಾನೆ.

ಆ ಬುದ್ಧಿಯನ್ನು ಮನಸ್ಸಿನ ಮೇಲೆ ನಿಗಾ ಇಟ್ಬಿಡಪ್ಪ. ಇಷ್ಟೇ ಸಾಕು. ಇದಕ್ಕೆ ಯಾವ ಇಂದ್ರಿಯವೂ ಬಳಸೋದು ಬೇಡ. ಇಂದ್ರಿಯವು ಕರ್ಮ ಮಾಡ್ತಾ ಇಲ್ಲ. ಯಾವುದೂ ಕರ್ಮ. ಬರೇ ಮನಸ್ಸು. ಬುದ್ಧಿಯು ಮನಸ್ಸಿನ ಮೇಲೆ ನಿಗಾ ಇಟ್ಟಾಗ, ಒಂದೊಂದೇ ಸಾಯಿಸಿಯೇಬಿಡ್ತದೆ ಅದು. ಮತ್ತೆ ಬುದ್ಧಿ ವಿಚಾರಕ್ಕೆ ಇಳೀತದೆ.

ಆ ಬುದ್ಧಿಯು ಆಗ ಕನ್ನಡಿಯ ಹಾಗೆ ತಿಳಿಯಾಯ್ತು. ಆ ಕನ್ನಡಿಯಲ್ಲಿ ಪ್ರತಿಬಿಂಬ ಬೀಳ್ತದೆ. ಅಂದರೆ ನಾನು! ಅದು ಪ್ರತಿಬಿಂಬ. ಅದು ಬೀಳೋದು ಇರುವಿಕೆಯನ್ನು ಸೂಚಿಸ್ತದೆ. ನಾನು ಯಾರು? ಇದೀಗ ಶೋಧನೆ. ನನ್ನ ಮೂಲ ಯಾವುದು? ನನ್ನ ಮೂಲ ಬೆಳಕು. ಬೆಳಕಿನಿಂದ ಉಂಟಾದವನು ನಾನು. ಕತ್ತಲೆ, ಅಂಧಕಾರದಿಂದ ಕೂಡಿದ . . . . ಈ ನಾನು ಯಾರು ಎಂಬ ವಿಚಾರದಿಂದ, ಈ ನಾನು ವಿಕಾಸ ಹೊಂದಿದಾಗ ಸ್ವಯಂಪ್ರಕಾಶವೇ ಆಯಿತು.

ಕತ್ತಲೆಯಿಂದ ಬೆಳಕಿನ ಕಡೆಗೆ ಹೋಗಿ ಬೆಳಕಿನಿಂದ ಕತ್ತಲೆಬೆ ಬಂದು ಹೇಳುವುದಕ್ಕೆ ಸಿದ್ಧ. ಯಾಕೆ ಇವ ಬಂದ? ಅವ ಮಾತ್ರ ಬೆಳಕು ಕಂಡುಬಿಟ್ಟರೆ ಸಾಲದು. ಬೆಳಕನ್ನು ಹುಡುಕುವವರು ಜಗತ್ತಿನಲ್ಲಿದ್ದಾರೆ. ಅಂಥ ಜನರಿಗೆ, ಅವನು ಸ್ವತಃ ಬರಲಿಲ್ಲ. ಅವನು ಕಳುಹಿಸಲ್ಪಟ್ಟ, ಹೋಗು ಸಂದೇಶವನ್ನು ಕೊಡು ಅಂತ್ಹೇಳಿ. ಅವನೇ ಬರಬೇಕಿತ್ತು. ಅವನು ಬರಲಿಕ್ಕಾಗ್ಲಿಲ್ಲ. ಯಾರನ್ನಾದರೂ ಒಬ್ಬರನ್ನು ಹಚ್ಚಿ ಬಿಡ್ತಾನೆ. ಕೆಲ್ಸ ಇಲ್ಲದೆ ಇದ್ದೋರನ್ನು ಹಚ್ಚಿ ಬಿಡ್ತಾನೆ.

ಡಾ। ಸುಧಾ – ಇದಕ್ಕಿಂತ ದೊಡ್ಡ ಕೆಲ್ಸ ಉಂಟಾ ಅಜ್ಜ? (ನಗು)

ಅಜ್ಜ – ಏನೋಪ್ಪ. ಅದೇ ಮೊದಲು ಸೇವಾ ಕಾರ್ಯ ಅಂದ್ರೆ ಇದು. ಸೇವೆ ಮಾಡುವುದು. ಬಂಧನದಿಂದ ಬಿಡುಗಡೆ ಹೊಂದುವಂಥಾದ್ದೇ ಸೇವೆ. ಒಬ್ಬ ಬಂಧನದಲ್ಲಿದ್ದಾಗ, ಅವನನ್ನು ಬಿಡುಗಡೆಗೊಳುಸುವಂಥದ್ದು ಸೇವೆ. ಬಂಧನದಲ್ಲಿ ಬಿದ್ದವನನ್ನು ಬಂಧನದಿಂದ ಬಿಡುಗಡೆಗೊಳಿಸುವಂಥದ್ದೊಂದು ಉಂಟು. ಒಂದು ದೇಹ. ವ್ಯಕ್ತಿ ಮತ್ತು ಶಕ್ತಿಯ ಸಮಗ್ರ ವಿಕಾಸ. ಅವನು ಮಾದರಿ ರೂಪವಾಗುತ್ತಾನೆ. ಅಷ್ಟೇ ಸಾಕು. ಮೌನದಿಂದ ಅವನು ಸಂದೇಶಗಳನ್ನು ಕೊಡ್ತಾನೆ. ಬರೇ ಮೌನದಿಂದ. ಮೌನ ಅಂದ್ರೆ ಏನು ಒಂದು ದೊಡ್ಡ care. ಆ ಮೌನದಲ್ಲಿ ಎಲ್ಲವೂ ಅಡಗಿದೆ. ಜೀವಾತ್ಮನು . . . . . ಕಪ್ಪು ಮೋಡ ಇತ್ತು ಮೊದಲು ಅಲ್ವ? ಅದು ಪರಿವರ್ತನೆ ಹೊಂದಿದಾಗ ಬಿಳಿ ಮೋಡವಾಯಿತು. ಬಿಳಿ ಮೋಡವು ವಿಕಾಸವಾದಾಗ ಪ್ರಕಾಶ ಉಂಟಾಯಿತು.

ಪ್ರಕಾಶಕ್ಕೆ ಅಡ್ಡ ಯಾವುದು? ಈ ಕಪ್ಪು ಮೋಡ. ಪ್ರಕಾಶ ಕಾಣುವುದಿಲ್ಲ. ಅದು ಬಿಳಿಯಾಗಿ ಪರಿವರ್ತನೆ ಹೊಂದಿತು. ಬಿಳಿಯಾದಾಗ ಬಿಳಿ ಮೋಡ ಉಂಟಲ್ಲ? ಪ್ರಕಾಶವೂ ಉಂಟು. ಹಾಗಾದರೆ ಪರಿವರ್ತನೆ ಹೊಂದಿದ ನಂತರ ಅದು ವಿಕಾಸವಾದಾಗ, ಅದು ಸ್ಫೋಟವಾದಾಗ, ಇದು ಯಾವುದು ಕಾರಣದೇಹದ ವಿಚಾರ. ಕಾರಣದೇಹವು ಸ್ಫೋಟವಾದಾಗ, ಕಾರಣದೇಹದಲ್ಲಿರುವಂಥಾದ್ದು ಬೆಳಕು. ಅದೇ ಆತ್ಮ, ಆನಂದ, ಸತ್ಯ, ಸಾವಿನಾಚೆಗಿನ ದ್ವಂದ್ವಾತೀತವಾದ ಬದುಕು. ಎಲ್ಲವೂ ಇದರ ಒಳಗೇ ಇರುವಂಥದ್ದು. ಎಲ್ಲಾ ಸಿದ್ಧಾಂತಗಳು. ಈ ಪ್ರಪಂಚದ ಒಂದು ರೂಪಾಂತರ ಅಲ್ವ ಇದು? ಈ ಒಂದು ದೇಹವನ್ನು ನಾವು ಶೋಧನೆ ಮಾಡಿದಾಗ, ಪ್ರಪಂಚದ ಇಡೀ ಎಲ್ಲ ಇದರಲ್ಲಿ ಅಡಗಿ ಉಂಟಲ್ಲ? ಮಣ್ಣು, ನೀರು, ಬೆಂಕಿ, ಗಾಳಿ ಎಲ್ಲವೂ? ಇದರಲ್ಲಿ.

ಇದನ್ನು ಶೋಧನೆ ಮಾಡಲಿಕ್ಕೆ ನಮಗೆ ಸಾಧ್ಯವುಂಟು. ದೇಹವನ್ನು ಶೋಧನೆ ಮಾಡ್ಬೇಕು. ಪ್ರಪಂಚವನ್ನು ಶೋಧನೆ ಮಾಡ್ಬೇಕು. ಹಾಗಾದರೆ ಈ ಅಣುವಿನಲ್ಲಿ ನಾವು ಮಹತ್ತನ್ನು ಕಾಣ್ಬೇಕಾಗಿದೆ. ಒಂದು ಅಣುವನ್ನು ಪರೀಕ್ಷೆ ಮಾಡಿದಾಗ ಅದರಲ್ಲಿ ಒಂದು ಮಹತ್ತರವಾದ ಇದನ್ನು ಕಂಡುಹಿಡಿದು, ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಒಳಗೆ ಜೀವಾತ್ಮನು ಅಣುರೂಪದಲ್ಲಿದ್ದಾನೆ. ಆ ಅಣುರೂಪದಲ್ಲಿದ್ದ ಜೀವಾತ್ಮನನ್ನು ಪರಿವರ್ತನೆಗೊಳಿಸುವಂಥದ್ದು – ವಿಕಾಸ. ನಾನು ಯಾರು? ಬೆಳಕಾಗಿ ಸಂಭವಿಸುವಂಥದ್ದು. ಹಾಗಾದರೆ ಬೆಳಕು ಎಲ್ಲಿ ಉಂಟು? ಇಲ್ಲಿಯೇ ಉಂಟು? ಆ ಅಂಧಕಾರವಾದ ಜೀವಶಕ್ತಿ ಒಳಗೇ ಉಂಟು. ಈ ಅಂಧಕಾರವನ್ನು ವಿಕಾಸಗೊಳಿಸಿದಾಗ ಅದು ಬೆಳಕಾಗಿ ಸಂಭವಿಸಿತು. ಕತ್ತಲೆಯೆಂಬುದೇ ಇಲ್ಲ. ಕತ್ತಲೆಯಲ್ಲಿ ಉಂಟು. ಇದು ಸೃಷ್ಟಿಯ ಒಂದು ರಹಸ್ಯ. ಅಲ್ಲ. ಸೃಷ್ಟಿಯನ್ನು ಉಂಟು – ಸೃಷ್ಟಿಕರ್ತನ ಒಂದು ರಹಸ್ಯ ಇದು ಹೇಳುವಂಥದ್ದು. ಸೃಷ್ಟಿಯ ರಹಸ್ಯ ವಿಜ್ಞಾನಿಗಳಿಗೆ ಗೊತ್ತುಂಟು. ಇನ್ನೊಂದು ವಿಜ್ಞಾನ ಉಂಟು. ಸೃಷ್ಟಿಕರ್ತನ ರಹಸ್ಯ – ತಾನು ಯಾರು? ತನ್ನ ಜನ್ಮದ ರಹಸ್ಯವೇನು? ಬಂದವನು ಹೇಳ್ತಾನೆ ತಾನು ಯಾರು? ತನ್ನ ಜನ್ಮದ ರಹಸ್ಯವೇನು? ನೋಡಿ. ತಾನು ಯಾರು? ಜನ್ಮದ ರಹಸ್ಯವೇನು? ಶೋಧನೆಯಿಂದ ಅರಿಯಬೇಕು. ಎಲ್ಲವೂ ನೀನೆ ಅಂತ ಹೇಳ್ತಾರೆ.

ಹಾಗಾದರೆ ನಾನು ಯಾರು? ಅವನನ್ನು ಬಿಟ್ಟ ನಾನು ಯಾರು? ಇಲ್ಲವಾದರೆ ನಾವು ಭಗವದ್ಗೀತ ಅದಕ್ಕೆಲ್ಲ ಬೆಲೆ ಕೊಡ್ಲಿಕ್ಕೆ ಕೂಡದು. ಅದಕ್ಕೆ ಬೆಲೆ ಕೊಡ್ತೀವಿ ಅಂತ ಹೇಳಿ. ಆದರೆ, ಪ್ರತಿಯೊಂದು ದೇಹದಲ್ಲಿರುವವನು ನಾನು . . . ಆ್ಞಂ! ಪ್ರತಿಯೊಂದರಲ್ಲಿರುವವನು ನಾನೇ. ಅದರಿಂದ ಸಂಪೂರ್ಣ ಖಾಲಿಮಾಡಿದಾಗ, ಅಲ್ಲಿ ಜಾಗ ಆಯ್ತು. ಅದು ವಿಶಾಲಗೊಂಡಿತು. ಸುಪ್ತ ಮನಸ್ಸಿನ ಜಾಗೃತಾವಸ್ಥೆ. ಆ್ಞಂ! ಒಂದು ನಿದ್ರೆ, ಇದು ಜಾಗೃತ ಅಂತ ಹೇಳಿದೆ. ಇದು ಜಾಗೃತ ಉಂಟು. ಆ ಜಾಗೃತ ಬಂದಾಗ ಇದು ನಿದ್ರೆ ಅಂತ ಹೇಳಿ ಕಾಣ್ತದೆ. ಆ ನಿದ್ರೆಗೆ ಇದು ಜಾಗೃತಾವಸ್ಥೆಗೊಂಡಾಗ ಇದು ಜಾಗೃತಾವಸ್ಥೆ, ಎಚ್ಚರಿಕೆ ಆದಾಗ ಜಾಗೃತಾವಸ್ಥೆ ಅದು ಅಂತ ಹೆಳಿ. ಇದು ನಿದ್ರೆ ಅಂತ ಹೇಳಿ ಕಾಣ್ಲಿಕ್ಕೆ, ಇನ್ನೊಂದು ಸ್ಥಿತಿಗೆ ಹೋದಾಗ ಇದು ನಿದ್ರೆ. ಆ್ಞಂ! ಒಂದು ಸುಷುಪ್ತ ಅಂತ ಹೇಳ್ತದಲ್ಲ.

ಬರ್ಲಿಲ್ಲ ಆ್ಞಂ! ಅದೇ ಬಂದಿದ್ದೇವೆ ಅಂದ್ರೆ. ಈಗ ಬರ್ಲಿ. ಬಂದಿದ್ದೇವೆ ಅಂತ್ಹೇಳಿ, ಅಥವ ಬರ್ಲಿಲ್ಲ ಅಂತ್ಹೇಳಿ. ಮತ್ತೆ ಜನ್ಮಕ್ಕೆ ಬರುವುದೂ ಇಲ್ಲ, ಹೋಗುವುದೂ ಇಲ್ಲ. ಯಾವುದೂ ಇಲ್ಲ. ಹಾಗಾದರೆ ಜನ್ಮಕ್ಕೆ ಬಂತು, ಬಂದು ಅದು ಇಲ್ಲದೆ ಆಯ್ತಲ್ಲ, ಅಲ್ವ? ಖಾಯಂ ಉಂಟ? ಯಾವಾಗ ಸೃಷ್ಟಿ ಅಂತ ಹೇಳ್ತದೋ ಅದು ಸ್ಥಿತಿ, ಲಯ

ಅಂತ್ಹೇಳಿ ಆಯ್ತು. ಹಾಗಾದರೆ ಯಾವುದು ಹುಟ್ಟಿಕೊಂದದ್ದು? ಅದು . . . ಇದುವೇ ಸಾಕ್ಷಾತ್ಕಾರ. ಅಲ್ವ? ಅದಕ್ಕೆ ಒಂದು ದೃಷ್ಟಾಂತ ನಾವು ಕೊಡ್ತದೆ. ಈ ಸೂರ್ಯ ಉಂಟು. ಸೂರ್ಯನ ಕಿರಣಗಳು ಹೀಗೆ ಬರ್ತಾ ಉಂಟು. ಒಂದಾನೊಂದು ಕಾಲದಲ್ಲಿ, ಈ ಕಿರಣಗಳು ಸಂಪೂರ್ಣ ಅಲ್ಲಿ ಇದಾದಾಗ ಸ್ಫೋಟ. ಅದೇ ರೀತಿಯಲ್ಲಿ ಈ ಜೀವಾತ್ಮನು.

ತಾನು ಯಾರು ಎಂಬ ವಿಚಾರ ಅಲ್ಲಿ ಉತ್ಪತ್ತಿಯಾಗಿ ಸ್ಫೋಟವಾಗಲು ಸಾಧ್ಯವಾಗುತ್ತದೆ. ಅದೇ ನಾನು ಮಾಡಬೇಕಾದ ಕೆಲಸ. ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಿ ಸ್ವತಂತ್ರನಾದ. ದೇಶವು ಸ್ವತಂತ್ರವಾದರೆ ಸಾಲದು. ದೇಹದಲ್ಲಿರುವವನು ಸ್ವತಂತ್ರನಾಗಬೇಕು. ದೇಶವು ಸ್ವತಂತ್ರವಾದರೆ ಸಾಲದು, ದೇಶದಲ್ಲಿರುವ ವ್ಯಕ್ತಿಗಳು ಸ್ವತಂತ್ರರಾಗಬೇಕು. ವ್ಯಕ್ತಿ ಸ್ವಾತಂತ್ರ್ಯ ಅಂದರೆ ಏನು? ಶಕ್ತಿಯ ಸ್ವಾತಂತ್ರ್ಯ. ಹಾಗಾದರೆ ಮೊದಲು ದೇಹ (ಶ?) ಸ್ವತಂತ್ರವಾಗಬೇಕು. ಆಮೇಲೆ ದೇಹದಲ್ಲಿರುವ ಶಕ್ತಿಯು ಸ್ವತಂತ್ರವಾಗಬೇಕು. ಮನೆಯಲ್ಲಿರುವವನು ಸ್ವತಂತ್ರನಾಗಬೇಕಾದರೆ, ಮನೆಯು ಸ್ವತಂತ್ರವಾಗಬೇಕು ಮೊದಲು. ಅಲ್ವ? ಮನೆ ಸ್ವತಂತ್ರವಾದಾಗ, ಅದರಲ್ಲಿರುವವನು ಸ್ವತಂತ್ರ. ಶಕ್ತಿ ಇದ್ದ ಕಾರಣ ವ್ಯಕ್ತಿ ಅನ್ನಿಸಿಕೊಳ್ತಾನೆ. \ \ \ \ \ \ \ \
ಶಕ್ತಿಯು ಸ್ವತಂತ್ರವಾದಾಗ ವ್ಯಕ್ತಿ ಸ್ವಾತಂತ್ರ್ಯದ ಮಹತ್ವ. ಒಂದಕ್ಕೊಂದು ಹೊಂದಾಣಿಕೆ. ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಿದ ಜೀವಾತ್ಮನು,

ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಿದಾಗ, ಏನಾಯ್ತು? ಬಂಧನಕ್ಕೆ ಬೀಳುವವನೇ ಇಲ್ಲ. ಅದು ನಿಜವಾದ ಸ್ವಾತಂತ್ರ್ಯ. ಸಾವಿನಾಚೆಗಿನ ದ್ವಂದ್ವಾತೀತವಾದ ಬದುಕು. ಇದು ನಮ್ಮ ಜನ್ಮಸಿದ್ಧವಾದ ಹಕ್ಕು. ಈ ಹಕ್ಕನ್ನು ನಾವು ಪಡೆಯಲಿಕ್ಕೆ ಸಾಧನೆ ಬೇಕಾ? ಆ್ಞಂ! ಅದರ ವಶ ಬಿಟ್ಟುಬಿಡಿ ಈಗ, free ಆಗಿ. ಇಂಜೆಕ್ಷನ್ ಕೊಡುವಾಗ ಆಗ ಸ್ವಲ್ಪ ಸಡಿಲ ಬಿಡಬೇಕು. ಮನಸ್ಸನ್ನು ಸಡಿಲ ಬಿಟ್ಟಾಗ, ಅದು ಹಾಕಿದಾಗ ಹೀಗೆ ಆಗ್ತದೆ.
ಹ್ಯಾಗೆ ಒಂದು ಇಂಚಿನ ಪೈಪಿನ ನೀರು, ಅದನ್ನು ೩ ಇಂಚಿನ ಪೈಪಿಗೆ ಹಾಕಿದರೆ, ಅದು ಮೆಲ್ಲಗೆ ಹೋಗ್ತದೆ. ಇದು force ಉಂಟು. ಅದು ೩ ಇಂಚಿಗೆ ಹಾಕಿ, ಅದು ಮೆಲ್ಲಗೆ ಹೋಗ್ತದೆ. ಹಾಗಾದರೆ ನಾವು ಆ ಪೈಪನ್ನು, ಅದೇ ಮನಸ್ಸನ್ನು ವಿಶಾಲ . . .. . ಅದು ಹೀಗೆ ಇದ್ದದ್ದು ಹೀಗೆ ಆಗ್ತದೆ. ಅಲ್ವ? ಒಂದು ಮಗು ಹುಟ್ಬೇಕಾದ್ರೆ ಹೇಗೆ ಬರ್ತದೆ? ತಲೆ ಕೆಳಗೆ ಕಾಲು ಮೇಲೆ. ನಿಜವಾದ್ದು ಹಾಗೆ ಅಲ್ವ? ಇಲ್ಲವಾದ್ರೆ ಸ್ವಲ್ಪ ಬುದ್ಧಿಮಟ್ಟು ಉಂಟು. ಮೂಲ ಸಿದ್ಧಾಂತ ಇದು. ಆಮೇಲೆ ಏನಾಯ್ತು? ತಲೆ ಮೇಲೆ ಕಾಲು ಕೆಳಗೆ. ಹಾಗಾದರೆ ಜೀವಾತ್ಮನು ಇದೇ ಹೀಗೆ – ಅಧೋಮುಖದಲ್ಲಿರುವ ಜೀವಾತ್ಮನನ್ನು ಊರ್ಧ್ವಮುಖವನ್ನಾಗಿ ಮಾಡಿದಾಗ, ಅವನು ನೋಡಿ, ಈ ನವದ್ವಾರಗಳನ್ನು ಬಿಟ್ಟು ಮೇಲೊಂದು ರಂಧ್ರ ಉಂಟಂತೆ ಏನು? ಅದರಲ್ಲಿ ಅವ ಹೋಗ್ತಾನೆ. ಹಾಗಾದರೆ ನವದ್ವಾರಗಳನ್ನು ಸಂಪೂರ್ಣ ಇದು ಮಾಡಿಬಿಟ್ಟ ಅಂದ್ರೆ, ಅವ ಅಲ್ಲಿ ಗೆದ್ದ. ಅವ ಪುನಃ ಬರೋದಿಲ್ಲ. ಅಧೋಮುಖವಾಗಿರುವ ಜೀವಾತ್ಮನು, ಊರ್ಧ್ವಮುಖವಾಗಿ ಎಲ್ಲಿ ಹೋಗ್ಬೇಕೋ ಅಲ್ಲಿ ಹೋಗ್ತಾನೆ. ಆ್ಞಂ! ಆದರೆ, ಇದು ಶಬ್ದಗಳ ಮೂಲಕ ಕೊಡುವಂಥದ್ದು. ಅದು ಎಷ್ಟು ವರ್ಣನೆ ಮಾಡಿದರೂ ಅದು ವರ್ಣನೆಯೇ, ಶಬ್ದಗಳಲ್ಲಿಯೇ ಉಳಿಯಿತು. ಕಿವಿಗೆ ಇಂಪಾಯಿತು.

ಒಬ್ಬರು – (ತಿಂಡಿಯ ವಿಷಯ ಹೇಳ್ತಾರೆ)

ಅಜ್ಜ – ಬಾಯಲ್ಲಿ ಇಟ್ಟಾಗ ಏನಾಗ್ತದೆ? ೫ ನಿಮಿಷ ನೀರಾದಾಗ ಇದೂ ಇಲ್ಲ. ಜನ್ಮಕ್ಕೆ ಬಂದವನು ಬಂದಾಯ್ತು. ಯಾಕೆ ಬಂದುದು ಎಂಬ ಪ್ರಶ್ನೆ ಆಮೇಲೆ. ಅದು ಬಂದಾಯ್ತಲ್ಲ. ನಾವು ಹಿಂದಕ್ಕೆ ಹೋಗೋದು ಬೇಡ ಇನ್ನು. ನಾವು ಮುಂದೆ ಮುಂದೆ ಹೋಗುವ. ಬಂದಾಯಿತು. ಇವ ಯಾರು ಬಂದವ. ಇವ ಯಾಕಪ್ಪ ಬಂದ? – – – – – ಅವ ಒಬ್ಬ ಇದ್ದ. ಅವನ ಅಸ್ತಿತ್ವ ಹೋದಾಗ, ಸಾಕ್ಷಾತ್ಕಾರ. – – – – – – – – – – ಬಂದವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಸಾಕ್ಷಾತ್ಕಾರ. ಅಲ್ಲಿ ಹೋಗ್ಲಿಕ್ಕೆ ಬರಲಿಕ್ಕೆ ಯಾರೂ ಇಲ್ಲ. ದೇಹ
ಆತ್ಮಸಾಕ್ಷಾತ್ಕಾರವೇ ಜಗತ್ಕಲ್ಯಾಣ. ಬಂಧನದಿಂದ ಬಿಡುಗಡೆ. ಈಗ ಅಧೋಮುಖವಾಗಿದ್ದಾನೆ. ತಲೆ ಕೆಳಗೆ ಕಾಲು ಮೇಲೆ. ಅವ ಹೋಗೋದು ಹ್ಯಾಗೆ? ಮಗು ಹುಟ್ಟುವಾಗ ತಲೆ ಕೆಳಗೆ ಬರ್ತದಲ್ಲ. ಇವ ಹೋಗ್ಬೇಕಾದ್ರೆ ತಲೆ ಕೆಳಗೆ ಕಾಲು ಮೇಲೆ ಇಟ್ಕೊಂಡು ಹೋಗೋದು ಹ್ಯಾಗೆ. ಹಾಗಾದರೆ ಇನ್ನೂ ಇದಾಗೆ ತಲೆ ಮೇಲಾದರೆ, ಊರ್ಧ್ವಮುಖನಾದರೆ ನೋಡಿ ಅವ ಎಲ್ಲಿ ಹೋಗ್ಬೇಕೋ ಅಲ್ಲಿ ಹೋದ. ಸನ್ಯಾಸಿಗಳ ಜೀವ ಹೋದಾಗ ತೆಂಗಿನಕಾಯಿ ಒಡೀತಾರಂತೆ, ಅಲ್ವ? ಯಾಕೆ? ಅದು ಮೇಕಪ್ ಮಾಡ್ತಾರೆ ಹಾಗೆ. ಅದು ಕೆಲವರು ಬೇಕಲ್ಲ ಹಾಗೆ. ಇಂಥದ್ದು ಸಂಭವಿಸಿದಾಗ ದೇಹಕ್ಕೆ ಅಣು ಸ್ಥಾನ. ಆಗೇನಾಯ್ತು? ಅದು ಕರ್ಮಬಂಧನದಿಂದ ಬಿಡುಗಡೆ ಆಯ್ತು. ಅಂಥ ದೇಹಕ್ಕೆ, ಕಳುಹಿಸಲ್ಪಟ್ಟ ಶಕ್ತಿಗಳು ಮಾತ್ರ

ಆದರೆ ಕಳುಹಿಸಿದವ ಬೇರೆಯಲ್ಲ, ಕಳುಹಿಸಲ್ಪಟ್ಟವ ಬೇರೆಯಲ್ಲ.

ಒಬ್ಬರು – ದಿನನಿತ್ಯ ಜೀವನದಲ್ಲಿ ಒಂದು ಸಮಸ್ಯೆ ಇದೆ ಅಜ್ಜ. ತಾವು ಇಷ್ಟರವರೆಗೆ ಹೇಳಿದಿರಲ್ಲ, ಅದೆಲ್ಲ ತುಂಬ ಚೆನ್ನಾಗಿದೆ. ಮನನ ಮಾಡ್ತಾ ನಾವು ಇದರ ಬಗ್ಗೇನೇ ನಾವು ಆತ್ಮ ಶೋಧನೆ ಮಾಡ್ತಾ ಕೂತ್ಕೋತೀವಿ. ನಾನು ಯಾರು? ಎಲ್ಲಿಂದ ಬಂದಿದ್ದೇನೆ? ಒಂದು ಹಂತಕ್ಕೆ ಬಂದು ಮುಟ್ಟಿದಾಗ ಏನಾಗ್ತದೆ, ಇದನ್ನೇ ಜಾಸ್ತಿ ಮಾಡ್ಬೇಕು ಅನ್ಸತ್ತೆ. ಸುಮ್ನೆ ಕೂತಲ್ಲೇ ಮಾಡ್ಬೇಕು ಅನ್ಸತ್ತೆ. ಆಗ ನಮಗೆ ಬೇರೆ ಕೆಲ್ಸಗಳು ಇವೆಯಲ್ಲ, ದಿನನಿತ್ಯದ ಜೀವನಕ್ಕೆ ಮಾಡುವಂಥದ್ದು, ಆ ಕಡೆ ಮನ್ಸು ಹೋಗಲ್ಲ ಆವಾಗ. ಈ ಕಡೆ ಜಾಸ್ತಿ ಬಂದ್ಬಿಟ್ಟು, ಆ ಕಡೆ ಕಮ್ಮಿ ಆಗತ್ತೆ.

ಅಜ್ಜ – ಇದು ಸ್ವಾನುಭವವೋ?

ಅವರು – ಸ್ವಾನುಭವ.

ಅಜ್ಜ – ಅದಕ್ಕೆ ಹೋದಾಗ, ಇದು ಕಮ್ಮಿಯಾಗತ್ತೆ.

ಅವರು – ಹ್ಞೂಂ, ಕಮ್ಮಿಯಾಗ್ತದೆ. ಆ ಸಮಯದಲ್ಲಿ, ಒಂದು ಸಂಶಯ ಹುಟ್ಟಿಕೊಳ್ಳತ್ತೆ. ನಾನು ಹೀಗೆ ಮಾಡ್ತಿರೋದು ಸರೀನಾ? ನಿಜವಾದ ಕರ್ತವ್ಯ ಏನು? ಯಾವುದು ಮಾಡಬೇಕು? ಎಲ್ಲಿ balance ಸಿಕ್ಕೋದು? Balance ಅಂದ್ರೆ, ಸಂತುಲನ ಹೇಗೆ ಕಾಪಾಡ್ಕೋಬೇಕು? ಇದು ಮಾಡುವುದು ಸರೀನಾ, ಅದು ಮಾಡೋದು ಸರೀನಾ? ತಾವು ಹೇಳ್ಬಹುದು ಅದನ್ನೇ ಮಾಡಿ ಅಂತ, ಆದ್ರೆ ಹಾಗೆ ಮಾಡೋಕೆ ಆಗಲ್ಲ ಅಜ್ಜ.

ಅಜ್ಜ – ವ್ಯವಹಾರವೇ ಪಾರಮಾರ್ಥಿಕವಾಗಿ ಸಂಭವಿಸಬೇಕು. ಪಾರಮಾರ್ಥಿಕ ಬೇರೆ, ನಮ್ಮ ವ್ಯವಹಾರ ಬೇರೆ ಅಂತ ಹೇಳಿ ಇಲ್ಲ. ನಮ್ಮ ನಿತ್ಯ ಜೀವನದಲ್ಲಿ ವ್ಯವಹಾರವೇ ಪಾರಮಾರ್ಥಿಕವಾಗಿ ಸಂಭವಿಸಿದಾಗ ಮಾತ್ರ ಇದು ಸಾಧ್ಯ.

ಒಬ್ಬರು – ಅದು ಕಷ್ಟ ಆಗತ್ತೆ ಅಜ್ಜ.

ಒಂದು ಕಡೆ ಕೂತಾಗ ಮನನ ಮಾಡ್ತಾ ಕೂತಿರ್ತೀವಿ. ಆಗ ಸಿಗುವ ಆನಂದಕ್ಕೂ, ಆಗ ಸಿಗುವ ಆಳಕ್ಕೂ, ನಾವು ಕಲಸ ಮಾಡಿಕೊಂಡು ಮಾಡ್ತೀನಿ ಅನ್ನೋದಕ್ಕೂ ತುಂಬ ವ್ಯತ್ಯಾಸ ಇದೆ. ನಾನು ಹೇಳ್ತೀನಿ ಭಗವಂತನ ಕೆಲಸಾನೇ ಮಾಡ್ತಿರೋದು ನಾನು, ಪ್ರತಿಯೊಂದರಲ್ಲೂ ಅದೇ ಇದೆ ಅಂತ. ಆಗ ಆ ಅನುಭವ ಬರೋದಿಲ್ಲ ಆಗ.

ಅಜ್ಜ – ನಮ್ಮ ಕೆಲಸವನ್ನು ನಾವು ಮಾಡುವ. ನಾವು ದೇಹದಲ್ಲಿದ್ದೇವಲ್ಲ, ಅದೂ ನಮ್ಮ ಕೆಲಸ, ಇದೂ ನಮ್ಮ ಕೆಲಸ. ನಮ್ಮ ಕೆಲಸವನ್ನು ನಾವು ಮಾಡುವ ಅಂತ ಕಾಣ್ತದೆ ನಮಗೆ. ನಮ್ಮ ಕೆಲಸ ಇದು.

ಒಬ್ಬರು – ಈಗ ನಮ್ಮ ಕೆಲಸ ಮಾಡ್ತಾ ಮಾಡ್ತಾ ತಿರುಗಿ ಆಸೆಗಳು ಹುಟ್ಟಿಕೊಳ್ಳತ್ವೆ ಅಜ್ಜ. ಅದು ತೊಗೋಬೇಕು, ಇದು ಮಾಡ್ಬೇಕು, ಅದನ್ನು ಮಾಡ್ಬೇಕು, ಮಕ್ಕಳಿಗೆ ತೊಗೋಬೇಕು, ಇನ್ನೂ ಸ್ವಲ್ಪ ಮೇಲ್ಬರ್ಬೇಕು, ಇದೆಲ್ಲ ಬರತ್ತೆ ಮತ್ತೆ ಒಂದೊಂದಾಗಿ, ಒಂದೊಂದಾಗಿ. ಕೂತ್ರೆ, ನಿಂತ್ರೆ ಒಂದೊಂದಾಗಿ ಬಂದ್ಬಿಡತ್ತೆ ಅದು.

ಅಜ್ಜ – ಅವರವರ ಯೋಗ್ಯತೆಯ . . . .

ನೀನೇ ದಯಾಪರನೋ . . . . . (ರಾಧಿಕ ಹಾಡುತ್ತಾಳೆ).

ಅಜ್ಜ – ಅವರವರ ಯೋಗ್ಯತೆಗೆ, ಕರ್ಮಕ್ಕೆ ಅನುಸರಿಸಿ ಫಲ.

ಕರ್ಮಕ್ಕೆ ತಕ್ಕ ಫಲ ಉಂಟು. ಯಾರಿಗೆ ಬೇಕೋ ಅವರಿಗೆ.

ಅದು ಕಷ್ಟ ಆಗ್ತದೆ ಅಂತ್ಹೇಳಿದವರಿಗೆ, ಇದು . . . .

ಇದು ಅಸತ್ಯ ಎಂದು ಅರಿವಾದಾಗ, ಸತ್ಯದ ಕಡೆಗೆ ಹೋಗ್ತಾನೆ. ಇದುವೇ ಸತ್ಯ ಅಂತ ಹೇಳಿ ಇರುವಾಗ, ಸತ್ಯದ ಕಡೆಗೆ ಇದು ಅಸತ್ಯ ಎಂದು ಅರಿವಾದವನಿಗೆ ಮಾತ್ರ ಸತ್ಯದ ಕಡೆಗೆ ಹೋಗಬಹುದು. ಅಲ್ಲಿ ಬಲಾತ್ಕಾರವಿಲ್ಲ. ಹೋಗಬೇಕು, ಅದು, ಇದು, ಏನೂ ಇಲ್ಲ. ಜೀವಾತ್ಮನು ಸಂಪೂರ್ಣ ಅಧಿಕಾರದಿಂದ ಜನ್ಮಕ್ಕೆ ಬಂದಿದ್ದಾನೆ. ಯಾವ ದಾರಿಯಲ್ಲಿ ಬೇಕೋ ಆ ದಾರಿಯಲ್ಲಿ ಹೋಗಬಹುದು. ಆ್ಞಂ! ಯಾವ ದಾರಿಯಲ್ಲಿ ಬೇಕಾದರೂ

ಹೋಗಬಹುದು. ಅದು ವ್ಯವಹಾರ ಬೇರೆ, ಆಧ್ಯಾತ್ಮ, ಆತ್ಮ ವಿಚಾರ ಬೇರೆ, ಬೇರೆ ಬೇರೆ ಇದ್ದಾಗ ಇದು ಸಾಧ್ಯ ಇಲ್ಲ. ವ್ಯವಹಾರವೇ ಪಾರಮಾರ್ಥಿಕ. ಚಿಂತೆಯು ಚಿಂತನೆಯಾಗಿ ಸಂಭವಿಸಿದಾಗ, ವ್ಯವಹಾರವೇ ಪಾರಮಾರ್ಥಿಕವಾಗಿ ಸಂಭವಿಸುತ್ತದೆ. ಚಿಂತೆ ಅಂದರೆ ದುಃಖ, ಅದು, ಇದು, ಎಲ್ಲ ಬರ್ತ್ತದಲ್ಲ. ಇದನ್ನು ಯಾವಾತನು ಸ್ವೀಕಾರ ಮಾಡ್ತಾನೋ, ಆ ಸ್ವೀಕಾರದಿಂದ, ಚಿಂತೆಯು ಚಿಂತನೆಯಾಗಿ ಸಂಭವಿಸಿದಾಗ, ಅಲ್ಲಿ ವ್ಯವಹಾರವೇ ಪಾರಮಾರ್ಥಿಕವಾಗುವುದು. ಆ ಚಿಂತನೆಯಿಂದೊಡಗೂಡಿದ ವ್ಯವಹಾರವೇ ಪಾರಮಾರ್ಥಿಕ ಜೀವನ. ಅದುವೇ ಯೋಗ ಜೀವನ. ಅದುವೇ ದಿವ್ಯ ಜೀವನ. ಕರ್ಮದಲ್ಲಿ ಜ್ಞಾನವು ಸಮ್ಮಿಲನಗೊಂಡಾಗ, ದಿವ್ಯ ಜೀವನ. ದಿವ್ಯ ಜೀವನದಿಂದಲೇ ಮೋಕ್ಷ, ಬಿಡುಗಡೆ. ಜೀವಾತ್ಮನು ಕರ್ಮ ಮತ್ತು ಜ್ಞಾನದಿಂದ ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಸ್ವತಂತ್ರನಾದ. ಆತ್ಮವೇ ಆದ. ಆತ್ಮ ವಿಚಾರಕ್ಕೆ ಬೇರೆ, ಇದು ಬೇರೆ ಅಂತ ಹೇಳಿ ಇದ್ದರೆ, . . . ನೋಡಿ ಹಾಗಾದರೆ ಕರ್ಮ ಹ್ಯಾಗಿರಬೇಕು? ಕರ್ತವ್ಯ ದೃಷ್ಟಿಯಿಂದ ಕರ್ಮ ಮಾಡುವಂಥಾದ್ದು ಶರಣಾಗತಿ. ಇಂಥದು ಮಾಡಿದವರಿದ್ದಾರಾ? ಅಮೋಘವಾದ, ಅಂದರೆ ಅದನ್ನು ವಿಚಾರಮಾಡಬೇಕು. ಅವರು ಕರ್ಮ, ಕರ್ಮವನ್ನು ಮಾಡ್ತಾ ಇರುವಾಗಲೇ ಆದವರಿದ್ದಾರೆ. ಆದರೆ ಏನಾಗ್ಬೇಕಲ್ಲಿ? ಸಾಧನೆ ಮಾಡುವ ಎಷ್ಟೋ ಸಾವಿರದಲ್ಲಿ . . . ಅಂಥ ಸಾವಿರದಲ್ಲಿ ಯಾರೋ ಒಬ್ಬನಿಗೆ ಸಿಕ್ತದೆ. ಆದರೆ ಈಗ ಯಾರಿಗೆ ಸಾಧ್ಯತೆ ಉಂಟು? ಒಬ್ಬನಿಗೆ ಅಂತ್ಹೇಳಿ ಈಗ ಲಾಟರಿ ಅಂತ ಹೇಳಿ ಉಂಟು. ಎಷ್ಟೋ ಸಾವಿರ 1st ಪ್ರೈಜ್. ಹಾಗಂತ ಹೇಳಿ ನಾವು ಬಾರ್ ಆಗ್ತಿವಾ? ಸಿದ್ಧಾಂತಗಳು ಸಿಕ್ಕುವುದಾ ಒಬ್ಬನಿಗೆ. ಒಂದಲ್ಲ ಒಂದು ದಿವ್ಸ ಅವನಿಗೆ ಸಿಕ್ಲೇ ಬೇಕಲ್ಲ. ಆ್ಞಂ! ಅದು ಇಂಥವನಿಗೆ ಅಂತ್ಹೇಳಿ ಉಂಟಾ? ನಮ್ಮ ಪ್ರಯತ್ನ. ಹಾಗಾದರೆ ಪ್ರತಿಯೊಬ್ಬನಿಗೂ ಅರ್ಹತೆ ಉಂಟು. ಇಂದೋ ನಾಳೆ, ನ್ಯೂ ಮಾರ್ಕ್ ಉಂಟು. ಸರತಿ ಮೇಲೆ ಹೋಗ್ತಾ ಉಂಟು. ಎಲ್ರೂ ಹೋಗ್ಲೇ ಬೇಕು. ಒಂದಲ್ಲ ಒಂದು ದಿವ್ಸ. ಹಾಗಾದರೆ ಏನು ಕಷ್ಟ ಉಂಟು. ಇದು ಮಾಡಿಕೊಂಡು ಅದು . . . ಏನಾಗೋದಿಲ್ಲ. ಇದರ ಜೊತೆಯಲ್ಲಿ ಇದರ ಜೊತೆಯಲ್ಲಿ ಆಗುವಂಥದ್ದು. ಅದು ಬೇರೆ ಅಂತ ಹೇಳಿದರೆ ಅದು ಅವನಿಗೆ ಪುರುಸೊತ್ತೇ ಇಲ್ಲ. ಅವನಿಗೆ ಟೈಂ ಸಿಕ್ಕೋದೇ ಇಲ್ಲ. ಅದು ಬೇರೆ, ಇದು ಬೇರೆ ಆಗೋದಿಲ್ಲ. ನಾನು ಬೇರೆ ನೀನು ಬೇರೆಯಲ್ಲ. ನಾನು ಅಂದ್ರೆ ನೀನೇ. ಇದು ಒಂದು ದೃಷ್ಟಾಂತ. ನಾನು ಅಂದರೆ ನೀನು. ನೀನೇ ನಾನಲ್ಲ. ಇದು ಅಹಂಕಾರ ಆಯಿತು. ಅದು ಅಹಂಕಾರ – ನೀನೇ ನಾನು – ಹ್ಞಾಂ! ಛೆ! ಛೆ! ಛೆ! ಛೆ! ಛೆ! 'ನಾನು' ಒಂದು ಶಬ್ದ ಉಂಟು. ಆ ನಿನ್ನ ಇರುವಿಕೆಯನ್ನ ಸೂಚಿಸುತ್ತದೆ. ಇದು ಮನಸ್ಸಿನ ವಿಕಾಸ – ಮನಸ್ಸು ಸೂಕ್ಷ್ಮತೆ – ಇದು ವಿಕಾಸ ಹೊಂದಬೇಕು. ಅಲ್ಲಿಗೆ ಹೋದ. ನಾನು ಅಂದರೆ ನೀನು. ಈ ನಾನು ಯಾರು? ಅಲ್ಲಿ ಮಾತ್ರ ನಾನು ಯಾರು ಎಂಬ ಶೋಧನೆಗೆ ಸಾಧ್ಯತೆ ಉಂಟು. ಇದನ್ನು ಶೋಧನೆ ಮಾಡ್ಬೇಕಲ್ಲ. ಹ್ಯಾಗೆ ಮಾಡೋದು? ಅಂದರೆ ಇದನ್ನಾದರೂ ಮಾಡಬಹುದು. ಶೋಧನೆ ಮಾಡುವವನು ಶೋಧಿಸಲ್ಪಡುವವನೇ ಆದಾಗ ಅಲ್ಲಿ 'ನಾನು' – ನಾನು ಇಂಥವನು ಎಂದ್ಹೇಳಿ ಅವನಿಗೆ ಅರಿವಾಯಿತು. ಯಾರೂಂತ ಇವನು. ಆ ನಾನುವಿನ ವಿಕಾಸತ್ವವೇ ಸಾಕ್ಷಾತ್ಕಾರ. ಅಲ್ಲಿ ಸಾಕ್ಷಾತ್ಕಾರ ಆಯಿತು ಅಂತ ಯಾವುದೂ ಇಲ್ಲ. ಒಂದು ಭಾವನಾತೀತ ಸ್ಥಿತಿ. ಯಾವುದೂ ಇಲ್ಲದ ಸ್ಥಿತಿ. ಸ್ಥಿತಿಯಲ್ಲದ ಸ್ಥಿತಿ ಅದು. ಕೀಟವು ಭ್ರಮರವೇ ಆಯಿತಂತೆ. ಅಲ್ವಾ? ಭ್ರಮರ ಕೀಟ ನ್ಯಾಯ. ಕೀಟವು ಭ್ರಮರವೇ ಆಯಿತು. ಸಣ್ಣ ಕೀಟ ಅದು ಹ್ಯಾಗೆ ಭ್ರಮರವಾಯಿತು. ಅದು ಬಂಧನಕ್ಕೊಳಪಟ್ಟಿತ್ತು. (ಹೆಚ್ಚು) ಧ್ಯಾನದಿಂದ ಭ್ರಮರವೇ ಆಯಿತು. ಹೌದು. ಆಮೇಲೆ? ಕ್ವಶ್ಚನ್ ಮಾರ್ಕ್ ಅಲ್ಲಿ. ಭ್ರಮರ ಉಂಟು. ಅದನ್ನು ಇದು ನೆನಪು ಮಾಡ್ತಾ ಇದು ಅದುವೇ ಆಗಿಹೋಯ್ತು. ಆಮೇಲೆ? ಅದು ಶಾಶ್ವತ – ಆ ಭ್ರಮರ ಹಾಗೇ ಉಂಟ ಅಲ್ಲಿ ಮತ್ತೆ? ಇದೂ ಇಲ್ಲ, ಅದೂ ಇಲ್ಲ. ಸ್ಥಿತಿಯಿಲ್ಲದ ಸ್ಥಿತಿ. ಜೀವಾತ್ಮನು ಏನಾದ? ಪರಿವರ್ತನೆ ಹೊಂದಿದ. ಏನೋ ಧ್ಯಾನದಿಂದ ಏನೋ ಒಟ್ಟು ಒಟ್ಟು ಶರಣಾಗತಿ – ಅವನ ಹಾಗೇ ಆದ. ಅಲ್ಲಿ ಅವ ಹಾಗೇ ಇದ್ದ. ಇವನು ಅವನ ಹಾಗೆ ಆದ. ಇದು ಪೂರ್ಣತ್ವ ಆಗಲಿಲ್ಲ. ಪೂರ್ಣತ್ವಕ್ಕೆ ಹೋಗಬೇಕಾದರೆ ಸಾಕಾರ – ನಿರಾಕಾರಕ್ಕೆ ಹೋಗಬೇಕು. ಇದು ಶೋಧನೆಯಲ್ಲಿ ನಾನು ಯಾರು? ನಾನು ಅದುವೇ ಆಗಿರುವನು, ಅದುವೇ ನಾನು ಎಂಬ ವಿಚಾರದಿಂದ ಈ ನಾನು ವಿಕಾಸ ಹೊಂದಿದಾಗ, ಅದುವೇ ಆಯಿತು. ಅದುವೇ ನಾನು ಅಂತ ಹೇಳ್ಲಿಕ್ಕೆ ಈ ನಾನು ವಿಕಾಸ ಆದ್ಮೇಲೆ – ಹೇಳ್ಲಿಕ್ಕಿಲ್ಲ, ಅಲ್ಲಿ ಎಲ್ಲ ಮೌನ. ಮಾತುಗಳಿಗೆ ಸಿಕ್ಕೋದಿಲ್ಲ. ಯಾವ ಮಾತು – ಅಲ್ವ? ಶಬ್ದದಿಂದ ಯಾರೋ ಒಬ್ಬನ

ಅದಕ್ಕೆಷ್ಟು? ಸಾವಿರಗಟ್ಲೆ ರೂಪಾಯಿ. ಒಂದು ದೇಹದಿಂದ ಬರುವ ಮಾತುಗಳಿಗೆ – ಇದಕ್ಕೆಷ್ಟು ಬೆಲೆಯುಂಟು? ೫ ನಯಾ ಪೈಸೆ ಬೇಕಾ? ಬೇಡ. ಇದಕ್ಕೆ ವ್ಯವಸ್ಥೆ ಮಾಡ್ಲಿಕ್ಕೆ ಒಂದು ಸಾವಿರ ರೂಪಾಯಿ ಮತ್ತೆ ಖರ್ಚು ಮಾಡ್ಬೇಕು. ಹಾಗಾದರೆ ದೇಹಕ್ಕೆ ಮಹತ್ವವಿಲ್ಲ. ದೇಹದಿಂದ ಬರುವ ಮಾತುಗಳಿಗೆ ಅದು ಎಲ್ಲಿಂದ ಬರುತ್ತದೋ ಅಲ್ಲಿಗೆ ಮಹತ್ವ. ಆ್ಞಂ! ಇದನ್ನು ಮಾಧ್ಯಮವಾಗಿ ಮಾಡಿಕೊಂಡು, ಯಾವುದೋ ಒಂದು ಶಕ್ತಿ, ಆ ಶಕ್ತಿಗೆ ಮಹತ್ವ. ಆ ಶಕ್ತಿ ಎಲ್ಲಿ ಉಂಟು? ಪ್ರತಿಯೊಬ್ಬನಲ್ಲಿ ಉಂಟು. ಪ್ರತಿಯೊಬ್ಬನಲ್ಲಿ ಉಂಟು ಅದು. ಒಂದು ಕಡೆಯಲ್ಲಿ ಇದ್ರೆ, ಒಂದು ಕಡೆಯಲ್ಲಿ ಇಲ್ದೆ ಇದ್ರೆ, ಪರಮಾತ್ಮನು ಅವನು, ಭೇದಭಾವನೆಯನ್ನು ಮಾಡಿದಾನೆ – ಅವನು ಮಾಡೋದಿಲ್ಲ ಹಾಗೆ. ಕೊಟ್ಟಿದ್ದಾನೆ. ಅವರವರ ಯೋಗ್ಯತೆಗೆ ಅನುಸರಿಸಿ, ಆ ನಾವು ಯಾವುದನ್ನು ಬೇಕಾದ್ರೂ, ಅದು ಬೇಕಾದ್ರೆ ಅದು ಉಂಟು, ಇದು ಬೇಕಾದ್ರೆ ಇದು ಉಂಟು. ಯಾವುದನ್ನು ಬೇಕಾದ್ರೂ, ಯಾರಿಗಾದರೂ, ಅವನು ತಯಾರಾಗಿರ್ಬೇಕು. ಮನಸ್ಸನ್ನು ಆ ಬಂಧನ, ಬಿಡುಗಡೆಗೆ ಈ ಮನಸ್ಸೇ ಕಾರಣ. ಹಾಗಾದರೆ ಪರಿವರ್ತನೆ

ಹೊಂದಿದ ಮನಸ್ಸು, ನೋಡಿ ಅಲ್ಲಿ ಅದು ಬಿಡುಗಡೆ ಹೊಂದಲು ಸಾಧ್ಯ. ಮೊದಲು ಅದು ಬಿಡುಗಡೆ ಆಗ್ಬೇಕಲ್ಲ. 'ಅಹಂ' ಹೋಗ್ಬೇಕು, 'ಸೋಹಂ' ಹೋಗ್ಬೇಕು. ಅಲ್ಲಿ ನಾನು, ಅಹಂ ಸೋಹಂ
ನಾನು ಅಂದರೆ ಅವನೇ. ಆ್ಞಂ! ಆ ನಾನು ಎನ್ನುವ ಶಬ್ದವು ಯಾವುದಕ್ಕೆ ಅನ್ವಯಿಸುತ್ತದೆ – ಅವನಿಗೆ ಮಾತ್ರ ಅನ್ವಯಿಸುತ್ತದೆ. ಅವನು ಹೇಳಿದ್ದಾನೆ ಹಾಗೆ. ಪ್ರತಿಯೊಂದು ದೇಹದಲ್ಲಿ ಇರುವವನು ನಾನು ಅಂತ ಹೇಳಿದಾನಲ್ಲಪ್ಪ ಅವನು. ಆ್ಞಂ! ಅಂದರೆ ನೀನೇ. ಇನ್ನು ಅವನು ಹೇಳುವುದು ನೀನೇ ಅಂತ ಹೇಳಿ. ಅಲ್ಲಿ ನಾನು ಅಂತ ಹೇಳಿದವನು ನೀನು ಅಂತ ಹೇಳ್ತದೆ. ಅಲ್ವ? ರೂಪಾಂತರವನ್ನು ಹೊಂದಿ ಪ್ರತಿಯೊಂದು ದೇಹದಲ್ಲಿ ಇರುವವನು ನೀನು. ಹಾಗಾದರೆ ನಾನು ಶಬ್ದ ಉಂಟಲ್ಲ. ನಾನು ಅಂದರೆ ನೀನೇ. ಇನ್ನು ಶಾಸ್ತ್ರ ಸಿದ್ಧಾಂತ. ಉಪನಿಷತ್ ಸಿದ್ಧಾಂತಗಳೂ ಅಲ್ವ? ಆ ಉಪನಿಷತ್‌ಕಾರರು ಆ ಕಾಲದಲ್ಲಿ ಮಾತ್ರ ಅಲ್ಲ. ಅವರಿಗೆ ಕಾಲ ಒಂದೇ. ವರ್ತಮಾನ ಕಾಲ ಮಾತ್ರ. ಈವಾಗಲೂ ಇದ್ದಾರೆ. ಆದರೆ ಅಗೋಚರವಾಗಿ. ಅಗೋಚರವಾದ ಮಾತ್ರದಿಂದ ಇಲ್ಲ ಅಂತ ಹೇಳ್ಲಿಕ್ಕೆ ಸಾಧ್ಯತೆ ಉಂಟ? ಆ್ಞಂ! ಇದು ಮೂಲಪ್ರಕೃತಿಯ ವಿಚಾರ. ಇದು ಪ್ರಕೃತಿ. ಮೂಲ ಪ್ರಕೃತಿ ಅಂದರೆ ಶಕ್ತಿ ಅದೂ ವಿಕಾಸವಾಗ್ತದೆ. ಇದೂ ವಿಕಾಸ ಆಗ್ತದೆ. ಮತ್ತೆ ಒಂದು ಅಂತ್ಹೇಳಿ ಗೊತ್ತಾಗ್ತದೆ. ಎಲ್ಲವೂ ಒಂದು. I AM THAT ಅಲ್ವ. ನಾನು ಅದು. ಇದು ಜೀವಾತ್ಮನ ಸಹಜಾವಸ್ಥೆ. ಅದಕ್ಕಾಗಿ ಜೀವಾತ್ಮನು ಜನ್ಮಕ್ಕೆ ಬಂದಿದ್ದಾನೆ. ಅವನು ಎಲ್ಲಿಂದ ಬಂದಿದ್ದಾನೋ ಅಲ್ಲಿಗೇ ಪುನಃ ಸೇರುವಂಥಾದ್ದು.

ಕೆಲವು ಜನರಿಗೆ ಅವಸರ ಇರ್ತದೆ. ಕೂಡ್ಲೇ ಆಗ್ಬೇಕು. ಅವರು ಹೊರಡ್ತಾರೆ. ಅವರು ಹೊರಡ್ತಾರೆ. ಕೆಲವು ಜನರು ಕೂಡ್ಲೇ. ಹುಡುಕುವವನಿಗೆ ಸಿಕ್ತದೆ. ಏಸುಕ್ರಿಸ್ತ ಏನು ಹೇಳಿದ್ದಾನೆ? ಬಾಗಿಲನ್ನು ತಟ್ಟು ಅಂತ್ಹೇಳಿ. ಇದು ತಟ್ಟುವ ಕೆಲಸ ಇವ ಮಾಡಿದಾಗ, ಆಚೇಲಿ ಅವ ಇರ್ತಾನೆ. ಅವ ಕಾಯ್ತಾ ಇದ್ದಾನೆ ಇವ ಯಾವಾಗ ತಟ್ತಾನೆ ಅಂತ್ಹೇಳಿ. ಹಾಗಾದರೆ ಇವನ ಕೈಯಲ್ಲಿ ಉಂಟು. ಹಾಗಾದರೆ ಪರಮಾತ್ಮನ ಚಿಂತನೆ ಮಾಡಬೇಕ. ಹೆಸರು ಬೇರೆ ಆ ರೂಪವನ್ನು, ಹೆಸರನ್ನು ತೆಗೆದರೆ ನಾನು ಅಂದರೆ ಅವನೇ. ಅವನ ವಿಕಾಸವೇ ಸಾಕ್ಷಾತ್ಕಾರ. ಜೀವಶಕ್ತಿ, ಪರಮಶಕ್ತಿ   ಪರಮಶಕ್ತಿಯ ವಿಕಾಸವೇ ಸಾಕ್ಷಾತ್ಕಾರ. ಇದೇ 'ತಮಸೋಮಾ ಜ್ಯೋತಿರ್ಗಮಯ'. ಅಂಧಕಾರಕ್ಕೆ ಪ್ರಾಧಾನ್ಯ. ಅವನನ್ನೇ ಧ್ಯಾನ ಮಾಡುತ್ತಾ, ಮಾಡುತ್ತಾ, ಮಾಡುತ್ತಾ, ಮಾಡುತ್ತಾ, ಮಾಡುತ್ತಾ, ಅವನ ಹಾಗೆ ಆದ.
ಹಾಗಾಗಿ ಪ್ರತಿಯೊಬ್ರೂ ಧ್ಯಾನ ಮಾಡ್ತಾರೆ. ಅಲ್ವ? ಧ್ಯಾನ ಮಾಡದವರು ಯಾರೂ ಇಲ್ಲ. ಹೆಚ್ಚೋ ಕಮ್ಮಿ, ಮಾಡಲ್ಪಡುವವನೇ ಆಗಬೇಕಲ್ಲ? ಧ್ಯಾನ ನಾನುವಿನ ಅಸ್ತಿತ್ವವೇ ಇಲ್ಲ. ಎಲ್ಲ ನೀನೇ. ಅಲ್ಲಿ ನಾನು ಇದ್ದರೆ ಅದು ನೀನೇ. ಅವನಿಗೆ ಅನ್ವಯಿಸ್ತದೆ. ಆ ನಾನುವಿನ ವಿಕಾಸವೇ ಸಾಕ್ಷಾತ್ಕಾರ. x x x x x x x x x x x x ಬಂಧನದಿಂದ ಬಿಡುಗಡೆ ಹೊಂದಿ ಸ್ವತಂತ್ರನಾದಾಗ ಅವನಿಂದ ಜಗತ್ತಿಗೆ ಸೇವೆ ಸಲ್ಲುತ್ತದೆ. ಇದ್ದಾರಾ? ಬಾಹ್ಯದಲ್ಲಿ ಇದ್ದಾರಲ್ಲ? ಒಂದು ದೇಹಕ್ಕೆ ಸಂಬಂಧಪಟ್ಟ ಸೇವೆ. ಅದೂ ಬೇಕು. ಅದು                ಪ್ರಾಧಾನ್ಯ. ಅದರ ಜೊತೆಯಲ್ಲಿ ಇದೂ ಕೂಡ. ಹಾಗಾದರೆ ಎರಡು ಬಗೆ ಸೇವೆ. ಒಂದು ದೇಹ ಪೋಷಣೆ, ಒಂದು ಆತ್ಮ ಪೋಷಣೆ. ಒಂದು ಬಹಿರ್ಮುಖ, ಒಂದು ಅಂತರ್ಮುಖ. Time?

ಸುಧಾ – ೮.೩೫.

ಅಜ್ಜ – ಯಾವಾಗಕ್ಕಿಂತ ಅರ್ಧಗಂಟೆ.

ಸುಧಾ – ಹೌದಜ್ಜ.

ಅಜ್ಜ – ಇದು ಇದುವರೆಗೂ ಮಾತಾಡಿದ ಒಂದು ಚಿತ್ರಣ. ಸಂಕ್ಷಿಪ್ತವಾಗಿ, ಎರಡು ಕಡೆಯಲ್ಲಿ. ಆ್ಞಂ! ಅದು ಅಲ್ಲವಾದರೆ ಅದು ಇದಾಗ್ತದೆ. ಇಂತಹ ಉದಾಹರಣೆಗಳನ್ನು ಎಷ್ಟೋ ಕೊಡಬಹುದು. ಅದೆಲ್ಲ ಪ್ರವಚನ ಆಯ್ತು. ನಮ್ಮ ಮನಸ್ಸಿನ ಮೇಲೆ ತಾಗಬೇಕು. ಅಂದರೆ ಅದು ಕೃತಿಗೆ ಸಂಬಂಧಪಟ್ಟ ವಿಚಾರಗಳು. ಮೊದಲು ನೀನಾಗು. ಆಮೇಲೆ ದೇವರು ನೋಡಿಕೊಳ್ತಾನೆ. ನೀನಾಗದೆ, ನಿನಗೆ ಏನೋ ಒಂದು ಉದ್ದಿಶ್ಯ ಬೇಕು. x x x x x x x ಅವನಿಗೆ ಒಂದು ಹೆಸರು, ಒಂದು ಕೀರ್ತಿ, ಒಂದು ಯಾವುದೋ ಒಂದು ಆಸೆ ಬೇಕಲ್ಲ. ಹೆಸರು ಬರಬೇಕು. ಕೀರ್ತಿ ಬರಬೇಕು. ಅವನೇ ಆದಾಗ, ನೋಡಿ ಅವ ಇಡೀ ಮಾದರಿ ರೂಪ. ಅವನ ಜೀವನವೇ ಒಂದು ಸಂದೇಶ.

ಬಳಸಿಕೊಳ್ತದೆ. ಅದರ ಕೆಲಸ ಆಗ್ಬೇಕಾದ್ರೆ ಒಂದು ದೇಹ ಬೇಕು ಅದಕ್ಕೆ. ಆ ದೇಹದ ಮೂಲಕ, ಅದು ಇಲ್ಲಿ ಅಲ್ಲ, ಮುಖ್ಯ – ನಾನು ಜನ್ಮಕ್ಕೆ ಬಂದಿದ್ದೇನೆಂಬ ಅರಿವಾದವನಿಗೆ ಇದು ಸಾಧ್ಯ. ಅವನು ಹೇಳ್ತಾನೆ. ನನಗೆ ತಂದೆ ತಾಯಿ ಯಾರೂ ಇಲ್ಲ. ತಂದೆ ತಾಯಿಗಳ ಗರ್ಭದ ಮೂಲಕ ನಾನು ಬಂದವನಲ್ಲ. ಅವನು ತಾನು ಯಾರು ಎಂಬ

ವಿಚಾರದಿಂದ ವಿಕಾಸ ಹೊಂದಿದಾಗ, ಇಡೀ ಪ್ರಕೃತಿಯ – ದೇಹವೇ ನಾನು ಎಂಬುದು ಪ್ರಕೃತಿ. ಅದೂ ಪ್ರಕೃತಿಯೇ. ಈ ಪ್ರಕೃತಿಯೂ ಒಂದು ದಿವಸ ವಿಕಾಸವಾಗ್ತದಲ್ಲ? ಈ ದೇಹ ಪ್ರಕೃತಿ. ಇದು ವಿಕಾಸವಾಗ್ತದೆ. ಹಾಗಾದರೆ ದೇಹದಲ್ಲಿರುವ ಆ ಮೂಲ ಶಕ್ತಿಯು ವಿಕಾಸವಾಗಲೇ ಬೇಕು. ಅದೂ ಮೂಲ ಪ್ರಕೃತಿ. ಇದೂ ಪ್ರಕೃತಿ. ಒಂದು ಕಬ್ಬಿಣದ ಸಂಕೋಲೆ. ಒಂದು ಬಂಗಾರದ ಸಂಕೋಲೆ. ಸಂಕೋಲೆ ಸಂಕೋಲೆಯೇ. ಅ್ಞಂ! ಯಾಕೆ ನಾವು ಅದಕ್ಕೆ ಮಹತ್ವ ಕೊಡಬೇಕು? ಯಾಕೆ ಇದನ್ನು ನಾವು ಸ್ಥಾನದಲ್ಲಿ ಹಾಗಾದರೆ ನಮಗೆ ಸಂಸಾರದಲ್ಲಿ ಉದ್ದಿಶ್ಯ ಅದರಲ್ಲಿ ಇದ್ದುಕೊಂಡು – ಸಂಸಾರ ಎಂದರೆ ದೇಹ. ದೇಹದಲ್ಲಿದ್ದುಕೊಂಡು, ಸಂಸಾರಕ್ಕೆ ತಿರಸ್ಕಾರವಿಲ್ಲ. ಆದರೆ ನಾವು ಸಂಸಾರಿಗಳಲ್ಲ. ಸಂಸಾರದಲ್ಲಿ ಇರುವವರು ಎಂಬ ಭಾವನೆ ಬಂದರೆ ಆಯ್ತಲ್ಲ. ಸಂಸಾರ ಎಂದರೆ ದೇಹ. ದೇಹವೇ ನಾನು. ದೇಹದಲ್ಲಿರುವವನು, ಸಂಸಾರದಲ್ಲಿರುವವರು ನಾವು, ಪ್ರತಿಯೊಬ್ಬರೂ. ಮೂಲ ಸಿದ್ಧಾಂತ ನಾವು ಆನಂದಸ್ವರೂಪಿಗಳು. ಸುಖ ದುಃಖಕ್ಕೆ ಇದೂ ಪ್ರಕೃತಿ, ಅದೂ ಪ್ರಕೃತಿ. ಇದು ಏನು ತಪ್ಪಲ್ಲ. ಇದೂ ಪರಮಾತ್ಮನ ಸೃಷ್ಟಿಯೇ ಅಲ್ವಾ? ಹಾಗಾದರೆ ಇದು ತಪ್ಪಾ? ಎಷ್ಟು ಸುಲಭ. ಇದರಲ್ಲಿ ಇದ್ದುಕೊಂಡು, ನೀನು ಅದಕ್ಕೆ ಹೋಗು ಅಂತ ಹೇಳಿ. ಮನೆ ಮತ್ತು ಮನುಷ್ಯ. ಮನೆಯೇ ಮನುಷ್ಯನಲ್ಲ. ಅಲ್ವ? ಇದನ್ನೂ ಹಾಗೆ. ಹೋಗ್ತಾ ಬರ್‍ತಾ ಇದ್ದ. ಆದ್ರೆ ಅವ ಇದ್ದಾನೆ. ಅವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಒಂದು ದಿವಸ, ಸಾಕ್ಷಾತ್ಕಾರ. ಹ್ಯಾಗೆ? ಇದು ನಿತ್ಯ ಜೀವನದಲ್ಲಿ ಸಂಭವಿಸುವಂಥಾದ್ದು. ವ್ಯವಹಾರವೇ ಪಾರಮಾರ್ಥಿಕ. ಪಾರಮಾರ್ಥಿಕ ಎಂಬುದು ಬೇರೆಯಲ್ಲ. ಆಧ್ಯಾತ್ಮಿಕ ಎಂಬುದು ನಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ಬಂದಾಗ ಮಾತ್ರ, ಅದೇನು ಕಟ್ಟು ಕಪಾಟಿನಲ್ಲಿಡ್ಲಿಕ್ಕೆ ಬುಕ್ಸ್‌ಗಳು? ಇವನದು ಅದೇ ತನ್ನನ್ನು ತಾನು ಅರಿಯುವಂಥದ್ದು. ಇದೇ – ಇರುವವನಿಗೆ ತನ್ನ ಇರುವಿಕೆಯ ಅರಿವಾದಾಗ, ಆ ಇರುವವನ ಅಸ್ತಿತ್ವವು ನಾಶವಾದಾಗ, ಅದೇ ಸಾಕ್ಷಾತ್ಕಾರ. ಅ್ಞಂ! ಅಸ್ತಿತ್ವ ನಾಶ. ಇದಕ್ಕೆ ಹಣ ಕೊಡೋದು ಬೇಡ. ಮನುಷ್ಯರ ಸಹಾಯ ಬೇಡ. ಹಾಗಾದರೆ ಇದ್ಕೆ ಒಂದು ಮನೆ ಕಟ್ಲಿಕ್ಕೆ ಎಷ್ಟು ಹಣ ಖರ್ಚು. ಎಷ್ಟೊಂದು ಜನರ ವಿಶ್ವಾಸ. ಏನೆಲ್ಲ ಗಲಾಟೆ, ಇದಕ್ಕೇನಂತಾರೆ? ಮನಸ್ಸನ್ನು ಮೂಲದಲ್ಲಿ ಕೇಂದ್ರೀಕರಿಸಲಿಕ್ಕೆ, ಪ್ರಕೃತಿಗೆ ಪಕ್ವವಾದ ಮನ್ಸು ಅವನ್ದು. ಆದರ ಸಹಜಾವಸ್ಥೆಗೆ ಹೋಗಿಬಿಟ್ಟರೆ ಆಯ್ತು. ಹಾಗೆ ಸಡಿಲ ಬೇಕು. ಯಾವ್ದು? ಮನಸ್ಸು. ಈ ಮಾತುಗಳು ಎಲ್ಲಿಂದ ಬರ್‍ತಾ ಇವೆ? ಅಲ್ಲಿಗೆ ಮನಸ್ಸು ಹಾಕು. ಅಲ್ವ? ಬೇರೆ ಕಡೆ ಪ್ರತಿಯೊಬ್ಬರೂ ಸರಿಸಮಾನರು. ಬಂಧನ ಮತ್ತು ಬಿಡುಗಡೆ, ಬಂಧನದ ಮೂಲದಲ್ಲಿಯೇ ಬಿಡುಗಡೆ ಉಂಟು. ಶಾಂತಿ ಮತ್ತು ಅಶಾಂತಿ, ಅಶಾಂತಿಯ ಮೂಲದಲ್ಲಿ ಶಾಂತಿ ಉಂಟು. ಶಾಂತಿ, ಅಶಾಂತಿ ಅಂತ ಹೇಳ್ಬೇಕಾದ್ರೆ, ಶಾಂತಿ ಇರ್ಲೇ ಬೇಕು. ಅ್ಞಂ!

ಒಬ್ಬರು – ಕತ್ತಲು ಬೆಳಕಿನ ಮೊಟ್ಟೆ.

ಅಜ್ಜ – ಇದು ಸ್ವಾನುಭವವಾ? ನಾವು ಮಾತಾಡ್ಲಿಕ್ಕೆ ಭಾರಿ ಗಡ್ಡಿದೆ. ಬಹಳ ಇದು ಬೇಕು. ನೀವು ನಾವು ಇದ್ದದ್ದು ಇದ್ದ ಹಾಗೆ ಹೇಳುವಾಗ ಸ್ವಲ್ಪ ಇದಾಗ್ತದೆ. ಅದು ನಿಮ್ಮ ಸ್ವಾನುಭವವೋ? ಯಾವುದರಲ್ಲಿ ಉಂಟದು? ಅದನ್ನು ನೀವು ಅನುಕರಣೆ ಮಾಡಿದಿರಿ ಈಗ ಅಲ್ವ?

ಒಬ್ಬರು – ಹೌದು.

ಅಜ್ಜ – ಬೇಸರ ಮಾಡ್ಬೇಡಿ. ನಾವು ಕೇಳಿಕೊಳ್ತದೆ ಕ್ಷಮಾಪಣೆ. ಅದು ಯಾಕೆ ಅದು ಆ ವಿಚಾರ? ಅದನ್ನು ಎಲ್ಲರಿಗೂ ಗೊತ್ತುಂಟಲ್ಲ? ನೀವು ಪ್ರಯತ್ನ ಮಾಡಿ ಅಂತ ನಾವು ಹೇಳ್ತದೆ. ಯಾಕೇಂದ್ರೆ ಸಂಪೂರ್ಣ ಇದರ ಚಿತ್ರಗಳು ಉಂಟು. ನೀವು ಹೋಗೋ ಅಂಥದ್ದೊಂದೇ ಬಾಕಿ. ಯಾವುದು? ವಿಚಾರವಾದಿಗಳಿಗೆ ಏನು ಶರಣಾಗತಿ ನೀನೇ.
ಆಗ ನೀವು ಮಾದರಿ ರೂಪವಾಗ್ತೀರಿ. ನಿಮ್ಮಿಂದ ಜಗತ್ತಿಗೆ ಸೇವೆ ಆಗ್ತದೆ. ಆ ಸೇವಾಕಾರ್ಯದಲ್ಲಿ ನೀವು ಭಾಗವಹಿಸಿ.

ಒಬ್ಬರು – ಧ್ಯಾನ ಎಲ್ಲ ದಿವಸದಲ್ಲಿ ಎಷ್ಟು ಗಂಟೆ ಕಾಲ ಮಾಡ್ಬೇಕು?

ಅಜ್ಜ – ಅದು ನಿಮಗೆ ಯಾವಾಗ ಸಮಯ ಉಂಟೋ ಆವಾಗಾವಾಗ.

ಒಬ್ಬರು – ಒಂದು ೧೦ ನಿಮಿಷ ಕಾಲುಗಂಟೆ ಕೂತರೂ ಸಾಕಾ?

ಅಜ್ಜ – ಒಂದು ಸೆಕೆಂಡು ಸಾಕು. ಒಂದು ಸೆಕೆಂಡು. ಒಂದು ಸೆಕೆಂಡು. ಆ್ಞಂ! Current shock ಹೊಡೀಬೇಕಾದರೆ, ನೀವು, ಹೊಡೀಲಿಕ್ಕೆ ಎಷ್ಟು ಸಮಯ ಬೇಕು? ಒಂದು ಸೆಕೆಂಡು. ಆದಕ್ಕೆ ಕೈ ಕೊಡ್ಲಿಕ್ಕೆ ನಮಗೆ ಹೆದ್ರಿಕೆ ಆಗ್ತದೆ. ಹೀಗೇsssss ಬರ್ತದೆ. ಕೊಟ್ಟುಬಿಟ್ರೆ ಹೋಯ್ತು ಭಯ. ಸತ್ತು ಹೋದ್ರೆ ಅಂತ. ನೋಡಿ, ಕೈ ಕೊಟ್ಟುಬಿಟ್ರೆ ಅಲ್ಲಿ ಒಂದು ಸೆಕೆಂಡು ಸಾಕು. ನೀನೇ. ಒಂದು ಸೆಕೆಂಡು ಸಾಕು. ಯಾವುದು? ಇಷ್ಟೇ ಮಾಡ್ಬೇಕಾದ್ದು. ನಿನ್ನ ಕರ್ತವ್ಯಗಳನ್ನೆಲ್ಲ ಅದಕ್ಕೆ ಸಮಯ ಅಂತ್ಹೇಳಿ ಇಲ್ಲ. ಬೇಕಾದರೆ ಸಮಯವನ್ನು ಇಟ್ಟುಕೊಳ್ಳುವ. ಆ್ಞಂ! ಇನ್ನು ಸಂಧ್ಯಾಕಾಲ. ಅದು (ರಾತ್ರೆ?) ಸಂಧ್ಯಾಕಾಲ ಬೇರೆ ಯಾಕೇಂದ್ರೆ ಬೆಳಕಿಲ್ಲ. ಕೆಲಸಗಳಿಗೆ ಹೋಗ್ಲಿಕ್ಕೆ ಬರ್ಲಿಕ್ಕೆ time ಇಲ್ಲ. ಬರೀ ಇದೇ ಆಯಿತು. ಎಲ್ಲ ಕೆಲಸಗಳು ಮುಗಿದ ಮೇಲೆ ಒಬ್ಬ ಕೂಲಿಕಾರನಿಗೂ ಕೂಡ ಕೆಲಸ ಎಲ್ಲ ಆದಮೇಲೆ, ಆಮೇಲೆ ಅವನು ಕೆಲವು ಜನರು ಸಿನಿಮಾಕ್ಕೆ ಹೋಗ್ತಾರೆ. ಇನ್ನು ಕೆಲವು ಜನರು ಕ್ಲಬ್ಬಿಗೆ ಹೋಗ್ತಾರೆ. ಇನ್ನು ಕೆಲವು ಜನರು ಆಟಕ್ಕೆ ಹೋಗ್ತಾರೆ. ಈ ಸಮಯವನ್ನು ಇದಕ್ಕೆ ಉಪಯೋಗಿಸಿದಾಗ, ಸಿನೆಮಾ ನೋಡ್ಲಿಕ್ಕೆ ನಮಗೆ ಎಷ್ಟು ಗಂಟೆ ಬೇಕು? ೧೧/೨ ಗಂಟೆಯೋ ೨ ಗಂಟೆಯೋ. ಕ್ಲಬ್ಬಿಗೆ ಹೋದರೆ, ಇನ್ನು ಆಟಕ್ಕೆ ಹೋದರೆ? ಆ್ಞಂ! ಹಾಗೆ ಹೋಗುವವರು ಹೋಗಲೇ ಬೇಕು. ಹಾಗೆ ಹೋಗದೇ ಮನೆಯಲ್ಲಿ ಇದ್ದವರು, ಅಲ್ಲಿ ಸಮಯವನ್ನು ಉಪಯೋಗಿಸಬಹುದು. ಇನ್ನು ಕೆಲಸದ ಜತೆಗೆ ಇದು. ಅದಕ್ಕೆ ಸಮಯ ಇಲ್ಲ. ಹಾಗೆ ಆ ಕೆಲಸವು ಅವನಿಂದಲೇ ಮಾಡಲ್ಪಡುವಂಥದ್ದು ಎಂಬ ಭಾವನೆ ಬರ್ಬೇಕು. ಅವನ ಕೆಲಸ ಎಂಬ ಭಾವನೆ ಬರ್ಬೇಕು. ಒಟ್ಟಿನಲ್ಲಿ ಯಾವುದೇ ಒಂದು ಅಪೇಕ್ಷೆ ಬೇಡ. ಉಂಟು ಎಂಬ ಅದಕ್ಕೆ ಮೊದ್ಲು ಆಗಬೇಕಾದ್ದು ಮನಸ್ಸು, ಚಂಚಲವಾದ ಮನಸ್ಸು ಹೊರಗೆ ಹೋಗ್ತಾ ಉಂಟು. ಒಂದಲ್ಲ ಒಂದಲ್ಲ . . . ಬಿಡುಗಡೆಗಾಗಿ. ಬುದ್ಧಿ ಅದರ ಮೇಲೆ ಅಲ್ಲಿ ಬುದ್ಧಿಯಲ್ಲಿ ಹಾಗೆ ಒಂದೊಂದಕ್ಕೆ, ಒಂದೊಂದಕ್ಕೆ ಹೋಗುವಾಗ last ಲ್ಲಿ ಬರೇ ಹಾಗಾದರೆ ನಾವು ಮಾಡಬೇಕಾದ ಮುಖ್ಯ ಕರ್ತವ್ಯ ಯಾವುದಪ್ಪ? ನಮ್ಮ ಪರಿಚಯವನ್ನು ನಾವು ಮಾಡಿಕೊಳ್ಳುವಂಥಾದ್ದು. ನಾನು ಯಾರು? ಆ ಪರಿಚಯ ಮಾಡಿಕೊಳ್ಳಲಿಕ್ಕೆ ನಮಗೆ ಅಡ್ಡಿ ಬರುವುದು ದೇಹವೇ. ನಾನು ಎಂಬ ಸಿದ್ಧಾಂತವನ್ನು ನಾವು ಬಿಟ್ಟು ಕೊಡಲಿಕ್ಕೆ ಅಷ್ಟೊಂದು ಸುಲಭದಲ್ಲಿ ಆಗೋದಿಲ್ಲ. ದೇಹ ನಾನಲ್ಲ ಎಂಬ ಅರಿವಾದಾಗ, ಅವ ಅಲ್ಲಿ ಹೊರಡ್ತಾನೆ. ಅಲ್ಲಿ ಬೇರೆ ಯಾವ ಕೆಲ್ಸವೂ – ಅದು ಅರಿವಾದಾಗ ಮಾತ್ರ – ಅದಲ್ಲದಿದ್ರೆ ಆಗೋದಿಲ್ಲ. ಇದಲ್ಲ ಅಂತ ಹೇಳಿ – ಆಗ ಅವನಿಗೆ ಅಲ್ಲವಾದರೆ ಅವನ ಹಟ, ಸಾಧನೆ ಮಾಡ್ಲಿಕ್ಕೆ ತೊಂದರೆ ಬರ್ತದೆ. ಇದು ಸಾಧನೆಗೆ ಒಳಪಟ್ಟದ್ದಲ್ಲ. ಬರೇ ಶೋಧನೆ. ಎಲ್ಲ ಉಂಟು. ನೋಡುವಂತಹ ದೃಷ್ಟಿಕೋನ ಬೆಳೆಸಿಕೊಂಡರೆ ಸಾಕು. ನಾಮ ಸ್ಮರಣೆ. ಈ ನಾಮಸ್ಮರಣೆಗೆ ಅನುಗುಣವಾಗಿ ಧ್ಯಾನ. ಆ್ಞಂ! ಅದಕ್ಕೆ ಅನುಗುಣವಾಗಿ ಒಂದು ಚಿತ್ರವನ್ನು ಕಲ್ಪಿಸಿಕೊಂಡು, ಅದನ್ನೇ . . . ಮೂರ್ತಿಯನ್ನು ನಾವು ಪೂಜೆ ಮಾಡಬೇಕು. ಆದರೆ ಮೂರ್ತಿಯಲ್ಲಿ ದೇವರು . . . ಮೂರ್ತಿಯೇ ದೇವರಲ್ಲ, ಮೂರ್ತಿಯಲ್ಲಿ ದೇವರು ಎಂಬ ಭಾವನೆ ಅದೇ. ದೇಹವೇ ತಾನಲ್ಲ, ದೇಹದಲ್ಲಿ ಇರುವವನು ನಾನು. ಈ ಮಣ್ಣಿನಿಂದ ತಯಾರಿಸಲ್ಪಟ್ಟ ಈ ಮೂರ್ತಿಯಲ್ಲಿ ಇರುವವನು, ಆ ಮೂರ್ತಿಯನ್ನು ಆ್ಞಂ! ನಾವು ದೇವರು ಅಂತ ಹೇಳ್ತೀವಲ್ಲ? ಮೂರ್ತಿಯಲ್ಲಿ ದೇವರು. ಆ ಮೂರ್ತಿಯನ್ನು ಮಾಡಿದ (blank) ಶಿಲ್ಪಿ ಯಾರು. ಒಂದಲ್ಲ ಒಂದು ದಿವ್ಸ ಅವನಿಗೆ ಇದು ಗೊತ್ತಾಗ್ತದೆ, ಓ ಇದು ನಾನಲ್ಲ. ಹಾಗಾದ್ರೆ ನಾನು ಯಾರು? ನಾನು ದೇಹಕ್ಕೆ ಬಂದವನು. ದೇಹವಲ್ಲ. ಒಂದು ಮನೆಯನ್ನು ಕಟ್ತಾನೆ. ಮತ್ತೊಬ್ಬ ಅದು ಅವನಿಗೆ ಗೊತ್ತುಂಟು. ಮನೆ ನಮ್ಮ ವ್ಯವಹಾರಕ್ಕೆ ಯಾವುದೂ ಬಾಧಕವಲ್ಲ. ನಮ್ಮ ವ್ಯವಹಾರಕ್ಕೆ ಯಾವುದು ಬಾಧಕವಲ್ಲ. ಆದರೆ ಸಾಧನೆ ಬೇಡ ಅಂತ ಹೇಳೋದು. ಇದ್ದದ್ದನ್ನು ನೋಡುವಂಥದ್ದು. ಇದ್ದದ್ದನ್ನು ನೋಡುವುದಕ್ಕೆ ಸಾಧನೆ ಬೇಡ. ಶೋಧನೆ. ಬರೇ . . . ಇಲ್ಲಿ ಜೀವ ಉಂಟು. ಇದು ಏನು? ಎಲ್ಲ ಬಿಡಿಸಿ ಎಲ್ಲ ಬಿಡಿಸಿ ಆದ್ಮೇಲೆ ಇಲ್ಲಿ ಏನುಂಟು. ಇಲ್ಲಿ ಖಾಲಿ. ಅದು ನಿಲ್ಲೋದಿಲ್ಲ. ಇನ್ನು ಶೋಧನೆ. ನಾನು ಯಾರು? ನಾನು ನಾನು ಅಂತ ಹೇಳ್ತೀರಲ್ಲ ಅದು ಯಾರು? ಆ ನಾನು ಎಂಬ ಶಬ್ದವು ಯಾವುದಕ್ಕೆ ಅನ್ವಯಿಸುತ್ತದೆ? ಅದರ ಶೋಧನೆಯಾದಾಗ ಯಾವುದೋ ಒಂದು ಸಿದ್ಧಾಂತ ಮಾತುಗಳಲ್ಲಿ, ಶಬ್ದಗಳಲ್ಲಿ ಶಬ್ದಗಳಿಗೆ ಸಿಕ್ಕೋದಿಲ್ಲ. (D.R.)

'ನಾನು' ಒಂದುವ್ಯಕ್ತಿಯೂ ಅಲ್ಲ, ಶಕ್ತಿಯೂ ಅಲ್ಲ. ಆ್ಞಂ!

ಆ ವಿಕಾಸ ಹೊಂದಿದ ಮನಸ್ಸು
ಆ ಪರಿವರ್ತನೆ ಹೊಂದಿದ ಜೀವಾತ್ಮನನ್ನು ಬಂಧನದಿಂದ ಬಿಡುಗಡೆಗೊಳುಸುವಂಥದ್ದು.

ಎಲ್ರೂ ಆ ದಾರಿಯಲ್ಲಿ ಹೋಗುವಾಗ ಎಲ್ಲ ದಾರಿಯಲ್ಲಿ ಒಂದೊಂದೇ ಸಿಕ್ತದೆ. ಅದಕ್ಕೆ ಬೇಕಾದ ವಿಚಾರ, ವಿಚಾರವೂ ಬೇಡ ನಿಮಗೆ. ನಿಮಗೆ ಯಾವ್ದು ಬೇಕೋ, ಹೋಗುವಾಗ ಸಿಕ್ತದೆ. ಎಲ್ಲಿಗೆ ಎಡೆಯಲ್ಲಿ

ಸಿಕ್ಕು ಅಂದ್ರೆ ಸಿಕ್ಕು. ಅದು ಹೋಗ್ತಾ ಆ ಗುರಿ, ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ಲೇ ಬೇಕು ಗುರಿ ಮುಟ್ಟುವಾಗ. ಅದರ ಮಧ್ಯದ್ದೆಲ್ಲ ಹಾಡಿಯೇ ಹೋಗ್ಬೇಕಲ್ಲ. ಒಬ್ಬನು ಕಾಲ್ನಡಿಗೆಯಲ್ಲಿ ಹೋಗ್ಬಹುದು, ಇನ್ನೊಬ್ಬನು ವಿಮಾನದಲ್ಲಿ, ಆದರೂ ಅವನು ಇದನ್ನು ದಾಟಲೇ ಬೇಕಲ್ಲ. ಅ್ಞಂ! ಈ ದಾರಿಯನ್ನು ದಾಟಲೇ ಬೇಕು ಅವ. ಏನು ಪ್ರಪಂಚ ಅಂದ್ರೆ. ಭಕ್ತ ಮತ್ತು ಭಗವಂತ. ಗುರಿ ಯಾವುದು ಭಗವಂತನಿಂದ್ಲೋ? ಅದು ಕೆಲವು ಜನರು ಹೇಳ್ತಾರೆ ಭಕ್ತನಿಗೆ ಸಾಧ್ಯ ಅಂತ. – – – – – ಭಕ್ತನಲ್ಲಿಗೆ ಪರಮಾತ್ಮ ಬರ್ತಾನೆ. ಅವನು ಅರ್ಹತೆ ಪಟ್ಟಾಗ ಅವನು ದಾರಿ ತೋರೆಸ್ಲಿಕ್ಕೆ ಶುರು ಮಾಡ್ತಾನೆ. ಆದರೆ ಕೈ ತಟ್ಟುವ ಕೆಲಸ ಮಾತ್ರ ಇವನು ಮಾಡಲೇ ಬೇಕು. ಅಕೋ ಅವನು ಬಂಧನದಲ್ಲಿದ್ದಾನೆ ಅಂತ.

ತಮಸೋಮಾ ಜ್ಯೋತಿರ್ಗಮಯ

ಅಸತೋಮಾ ಸದ್ಗಮಯ ಅ್ಞಂ! ಬೆಲ್ ಆಯ್ತು. ಅಲ್ಲಿಂದ ಬಂದು ಜನ ಬಂತು. ಏನಾಗ್ಬೇಕು ನಿಮಗೆ? ನೋಡಿ. ಮ್ಯಾನೇಜರ್ ಇದ್ರು. ಅವನು ಕೂಡ್ಲೇ ಜನ ಕಳಿಸಿದ. ಅವನಿಗೆ ಗೊತ್ತಾಯ್ತು ಇಂಥ ನಂಬ್ರದಿಂದ್ಲೇ ಫೋನ್ ಬಂತು. ನಿನಗೇನಾಗ್ಬೇಕು ಅಂತ ಕೇಳ್ತಾನೆ ಕೆಲಸ. ಅ್ಞಂ! ಹಾಗಾಗಿ ಕಳಿಸಿದವನು ಬೇರೆ ಅಲ್ಲ, ಕಳುಹಿಸಲ್ಪಟ್ಟವನು ಬೇರೆ ಅಲ್ಲ.

*****